ಇಲ್ಲ. ವಿಯೆನ್ನಾದಲ್ಲಿ ಬರೀ ಸಂಸ್ಕೃತ ಅಧ್ಯಯನಗಳು ಇವೆ. ಸಮಕಾಲೀನ ಭಾರತದ ಬಗ್ಗೆ ಯಾರೂ ಮಾಡುತ್ತಿಲ್ಲ. ನಾನು ಮ್ಯೂನಿಕ್ಕಿನಲ್ಲಿ 11 ವರ್ಷಗಳಿಂದ ಕನ್ನಡ ಪಾಠ ಮಾಡುತ್ತಿದ್ದೀನಿ. ಹೊಸ ಕನ್ನಡ ಪಠ್ಯ ಪುಸ್ತಕ ಬರೀತಾ ಇದ್ದೀನಿ. ಇಂತಹ ಬೆಂಬಲ ಯಾರಿಗೆ ಸಿಗಬೇಕು ಅಂದರೆ ನಮಗೆ. ನೀವು ನಮ್ಮಲ್ಲಿ ಬರಬಹುದು. ನನ್ನ ಸಂಸ್ಥೆ ನೋಡಬಹುದು, ಜನರನ್ನು ಮಾತನಾಡಿಸಬಹುದು' ಎಂದೆ. ಮೂರು ಜನ ಶಾಸಕರು ಹೈಡಲ್‌ಬರ್ಗ್, ವೂರ್ಶ್‌ಬರ್ಗ್, ವಿಯೆನ್ನಾ, ಮ್ಯೂನಿಕ್ಕಿಗೆ ಬಂದು ಹೋದರು. ಕೆಲವು ದಿವಸದ ನಂತರ ನಾಲ್ಕೂ ವಿಶ್ವವಿದ್ಯಾಲಯಗಳಿಗೆ ದುಡ್ಡು ಕೊಡಬೇಕು ಎಂದು ತೀರ್ಮಾನವಾಯಿತು. ಆಮೇಲೆ ನಾನು ಮೂರು ಸಲ ಬೆಂಗಳೂರಿಗೆ ಹೋದೆ. ಪತ್ರ ಬರೆದೆ. ಪ್ರಯೋಜನ ಆಗಲಿಲ್ಲ. ನಾನು ಪೆದ್ದ, ಇಷ್ಟರೊಳಗೆ ಯೂನಿರ್ವಸಿಟಿಯಲ್ಲಿ ಎಲ್ಲಾ ಕಡೆ ಹೇಳಿದ್ದೆ, 'ಪತ್ರ ಬಂದಿದೆ. ನಮ್ಮ ಸಂಸ್ಥೆಗೆ ಇಂಡಿಯಾದಿಂದ ಬೆಂಬಲ ಸಿಕ್ಕಿದೆ' ಅಂತ. ಎಲ್ಲರೂ ಅಭಿನಂದಿಸಿದರು. ಆಮೇಲೆ ನೋಡಿದರೆ ಮುಖಭಂಗ.

> ಕನ್ನಡದಲ್ಲಿ ತುಂಬ ಒಳ್ಳೆಯ ಕಾದಂಬರಿಗಳು ಇರಬಹುದು. ಆದರೆ ಭಾಷಾಂತರ ಮಾಡುವುದು ಕಷ್ಟ. ಕೆಲವೊಮ್ಮೆ ಓದುಗರಿಗೆ ಸ್ವಲ್ಪ ಹೆಚ್ಚಿನ ಸಾಂಸ್ಕೃತಿಕ ಹಿನ್ನೆಲೆ, ಪರಿಜ್ಞಾನ ಬೇಕು. ಅದು ಇರದಿದ್ದರೆ ಸಾಹಿತ್ಯ ಅರ್ಥವಾಗದು. ನವ್ಯ ಸಾಹಿತ್ಯದಲ್ಲಿ ಹೀಗೆ ಐರೋಪ್ಯ ಭಾಷೆಗಳಿಗೆ ಅನುವಾದವಾಗುವ ಒಂದು ಗುಣವಿದೆ. ಯಾಕೆಂದರೆ ಅವರು ವ್ಯಕ್ತಿಯ ಒಳಗೆ ನಡೆಯುವ ಆತ್ಮವಿಮರ್ಶೆಯನ್ನು ವಿವರವಾಗಿ ಹೇಳುತ್ತಾರೆ. ಅದಕ್ಕೆ ಸಾಂಸ್ಕೃತಿಕ ಹಿನ್ನೆಲೆಯ ಬಗ್ಗೆ ಪ್ರತ್ಯೇಕ ವಿವರ ಬೇಡ.

◆ **ಇಲ್ಲಿ ಯಾರು ಕನ್ನಡ ಕಲೀತಾರೆ?**

ಹೆಚ್ಚಿನ ವಿದ್ಯಾರ್ಥಿಗಳಿಗೆ ಭಾಷೆ ಸಾಹಿತ್ಯಗಳ ಬಗ್ಗೆ ಆಸಕ್ತಿ ಇರುವುದಿಲ್ಲ. ನಮ್ಮ ಸಂಸ್ಥೆಯ ವಿಶೇಷತೆ ಅಂದರೆ ರಿಲಿಜಿಯಸ್ ಅಂಡ್ ಫಿಲಾಸಫಿಕಲ್ ಸ್ಟಡೀಸ್. ಇಬ್ಬರು ವಿದ್ಯಾರ್ಥಿನಿಯರು ಅಕ್ಕಮಹಾದೇವಿ ಬಗ್ಗೆ ಕೆಲಸ ಮಾಡಿದರು. ಬೇರೆ ಒಬ್ಬರು ಮಿರ್ಜಿ ಅಣ್ಣಾರಾಯರ ಜೈನಧರ್ಮದ ಕೃತಿಗಳಲ್ಲಿ ಅಹಿಂಸೆಯ ಪರಿಕಲ್ಪನೆ ಬಗ್ಗೆ ಒಂದು ಚಿಕ್ಕ ಯೋಜನೆ ಬರೆದರು. ಕರ್ನಾಟಕದ ಸಮಾಜದ ಬಗ್ಗೆ ಯಾವುದೊ ಒಂದು ಆಸ್ಪೆಕ್ಟನ್ನು ಅಭ್ಯಾಸ ಮಾಡಬೇಕು. ಅದಕ್ಕೆ ಕನಿಷ್ಠ ಕನ್ನಡ ಕಲೀಬೇಕು. ಅಂಥವರು ಬರುತ್ತಾರೆ. ಹೊರಗಡೆಯಿಂದ ಹೆಚ್ಚಿನ ವಿದ್ಯಾರ್ಥಿಗಳನ್ನು ಆಕರ್ಷಿಸಲು ನಾನು ಕನ್ನಡದಲ್ಲಿ ಇಂಟರ್ನ್‌ಶಿಪ್ ಕೋರ್ಸ್ ಕೊಟ್ಟೆ. ಪ್ರತಿದಿವಸ ಅರ್ಧ ದಿನ ಪಾಠ. ಎರಡು ವಾರಗಳಲ್ಲಿ ಕನ್ನಡ ವ್ಯಾಕರಣ ಕಲೀತಾರೆ. ಸ್ವಲ್ಪ ಪ್ರಾಥಮಿಕ ಶಬ್ದಕೋಶ ಕಲೀತಾರೆ. ಒಬ್ಬ ವಿದ್ಯಾರ್ಥಿನಿ ಸ್ವಿಟ್ಜರ್ಲೆಂಡ್‌ನಿಂದ ಪ್ರತಿವಾರ ಮೋಟರ್ ಸೈಕಲ್‌ನಲ್ಲಿ ಬಂದರು ಕನ್ನಡ ಪಾಠಕ್ಕೆ. ನ್ಯೂಜಿಲೆಂಡ್‌ನ ಒಬ್ಬ ವಿದ್ಯಾರ್ಥಿನಿಗೆ ಆಂತ್ರೊಪಾಲಜಿಯಲ್ಲಿ ಆಸಕ್ತಿಯಿತ್ತು. ಅವರು ಉತ್ತರ ಕರ್ನಾಟಕದ ಸವದತ್ತಿಯ ಯಲ್ಲಮ್ಮ ದೇವಸ್ಥಾನಕ್ಕೆ ಹೋದರು. ಇಂಡಿಯಾದಲ್ಲಿ ಎಲ್ಲ ಸುಶಿಕ್ಷಿತರಿಗೂ ಇಂಗ್ಲಿಷ್ ಬರುತ್ತದೆ. ಆದರೆ, ಸವದತ್ತಿಯಲ್ಲಿ ಅಲ್ಲ. 'ನನಗೆ ಯಾರ ಮಾತೂ ಅರ್ಥವಾಗುವುದಿಲ್ಲ' ಅಂದರು. ವಾಪಸ್ಸು ಹೋಗಿ ಮಾರ್ಗದರ್ಶಕರ ಹತ್ತಿರ ಹೇಳಿದರು, 'ಕ್ಷಮಿಸಿರಿ. ಭಾಷೆಯ ಅಡಚಣೆ ಇದೆ'.